'ಶಿರಡು'

ಕರ್ನಾಟಕ ಸರ್ಕಾರ

ನೋಂದಣಿ ಮತ್ತು ಮುದ್ರಾಂಕ ಇಲಾಖೆ

ಸಂಖ್ಯೆ: Comp/9/2003-04

ನೋಂದಣಿ ಮಹಾಪರಿವೀಕ್ಷಕರು ಮತ್ತು
ಮುದ್ರಾಂಕಗಳ ಆಯುಕ್ತರ ಕಛೇರಿ,
7ನೇ ಮಹಡಿ, ಜಲಮಂಡಳಿ ಕಟ್ಟಡ,
ಕಾವೇರಿ ಭವನ, ಬೆಂಗಳೂರು.
ದಿನಾಂಕ:06-11-2007

## ಸುತ್ತೋಲೆ- 15

ವಿಷಯ: ಸರ್ವಿಸ್ ಪ್ರೊವೈಡರ್ ( ಮೆ//ECIL ಹಾಗೂ ಮೆ// CMS ಕಂಪ್ಯೂಟರ್ ಲಿ.,)ರವರುಗಳಿಗೆ ಪಾವತಿಸಲ್ಪಡುವ ಸ್ಕ್ಯಾನಿಂಗ್ ಶುಲ್ಕದ Invoice ಗಳಲ್ಲಿ ತಿದ್ದುಪಡಿ ಮಾಡುತ್ತಿರುವ ಕುರಿತು.

ಉಲ್ಲೇಖ: 1) ಗಣಕೀಕರಣ ಸುತ್ತೋಲೆ 10-ಸಂಖ್ಯೆ Comp:9/2003-04 ದಿನಾಂಕ 29-9-2004.

2) ಮೆ//ECILರವರ ಪತ್ರ ಸಂಖ್ಯೆ: ECSB/ISD/MKTG/KAVERI/04/272 ದಿನಾಂಕ: 31-10-2007

3) ಮೆ//CMS ರವರ ಪತ್ರ ದಿನಾಂಕ 31-10-2007

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ತಿಳಿಯಪಡಿಸುವುದೇನೆಂದರೆ, ಸ್ಕ್ಯಾನ್ ಮಾಡಲಾದ ದಸ್ತಾವೇಜುಗಳಿಗೆ ಕುರಿತಂತೆ ಸರ್ವಿಸ್ ಪ್ರೊವೈಡರ್‌ಗಳಿಗೆ ಪಾವತಿಸಲಾಗುತ್ತಿರುವ ಸೇವಾ ಶುಲ್ಕದಲ್ಲಿ ಸ್ಕ್ಯಾನ್ ಮಾಡಿದ ಪುಟಗಳಿಗಿಂತ ಕಡಿಮೆ ಪುಟಗಳನ್ನು Invoice ನಲ್ಲಿ ನಮೂದಿಸಿ ಅಂದರೆ ಪ್ರಿಂಟ್ ಆದ ಪುಟಗಳನ್ನು ಉಪನೋಂದಣಾಧಿಕಾರಿ /ಜಿಲ್ಲಾ ನೋಂದಣಾಧಿಕಾರಿ, ರವರು ತಿದ್ದುಪಡಿ ಮಾಡಿ ಧೃಡೀಕರಿಸಿ ನೀಡಲಾಗುತ್ತಿರುವ ವಿಚಾರವನ್ನು ಮೆ. ECIL ಹಾಗೂ ಮೆ.CMS ಕಂಪ್ಯೂಟರ್ಸ್ ಲಿ. ರವರು ಉಲ್ಲೇಖ (2) ಮತ್ತು (3)ರ ಪತ್ರಗಳನ್ವಯ ತಿಳಿಸಿರುತ್ತಾರೆ. ಇದರಿಂದಾಗಿ ತಮಗೆ ಪಾವತಿಸಬೇಕಾದ ಸೇವಾ ಶುಲ್ಕದಲ್ಲಿ ಕಡಿಮೆಯಾಗಿ ಪಾವತಿಯಾಗುವುದಾಗಿ ತಿಳಿಸಿರುತ್ತಾರೆ.

ಈ ವಿಚಾರವಾಗಿ ಪರಿಶೀಲಿಸಲಾಗಿ ಉಲ್ಲೇಖ (1)ರ ಸುತ್ತೋಲೆಯಲ್ಲಿ " ಮುದ್ರಿತ ಅಂಕಿಗಳು ತಪ್ಪಾಗಿದ್ದರೆ ನಿಖರವಾದ ಅಂಕಿ ಅಂಶಗಳನ್ನು ಸರಿಪಡಿಸಿ ಉಪನೋಂದಣಾಧಿಕಾರಿಗಳು ಸಹಿ ಮಾಡತಕ್ಕದ್ದು " ಎಂಬ ಸೂಚನೆಯನ್ವಯ ತಿದ್ದುಪಡಿ ಮಾಡತ್ತಿರಬಹುದೆಂದು ಕಂಡು ಬಂಧಿರುತ್ತದೆ.

ಮುದ್ರಿತ ಅಂಕಿಗಳು ತಪ್ಪಾಗಿರಲು ಒಂದಕ್ಕಿಂತ ಹೆಚ್ಚು ಕಾರಣಗಳಿರಬಹುದು.

ಉದಾ: 1) ಯಾವುದೇ ತಾಂತ್ರಿಕ ದೋಷಗಳಿಂದಾಗಿ ಸ್ಕ್ಯಾನ್ ಮಾಡಲಾದ ಪುಟಗಳಿಗಿಂತ ಹೆಚ್ಚು ಪುಟಗಳು Invoice ನಲ್ಲಿ ತಪ್ಪಾಗಿ ಪ್ರಿಂಟ್ ಆಗಿರಬಹುದು.

2) ಹಿಂದಿನ ತಿಂಗಳಿನಲ್ಲಿ ಸ್ಕ್ಯಾನಿಂಗ್ ಶುಲ್ಕ ಪಡೆದು ಯಾವುದೇ ಕಾರಣಕ್ಕಾಗಿ ಅಮಾನತ್ತಿನಲ್ಲಿಟ್ಟ ದಸ್ತಾವೇಜುಗಳನ್ನು ಪ್ರಸ್ತುತ ತಿಂಗಳಿನಲ್ಲಿ ನೋಂದಣಿಗೆ ಬಿಡುಗಡೆಗೊಳಿಸಿದಾಗ ಅಮಾನತ್ತಿನಿಂದ ಬಿಡುಗಡೆ ಗೊಂಡ ದಸ್ತಾವೇಜುಗಳ ಪುಟಗಳೂ ಸೇರಿಕೊಂಡು ಪ್ರಸ್ತುತ ತಿಂಗಳಿನಲ್ಲಿ ನೋಂದಣಿಗೆ ಸ್ವೀಕರಿಸಿ ನೋಂದಾಯಿಸಿದ ದಸ್ತಾವೇಜುಗಳಿಗಿಂತ ಹೆಚ್ಚು

ಪುಟಗಳಾಗುತ್ತವೆ. ಆದರೆ ಆ ತಿಂಗಳಿನಲ್ಲಿ ಸ್ವೀಕರಿಸಿದ ಸ್ಕ್ಯಾನಿಂಗ್ ಶುಲ್ಕವು ಅದೇ ತಿಂಗಳಿನಲ್ಲಿ ಸ್ಕ್ಯಾನ್ ಮಾಡಲಾದ ಒಟ್ಟು ಪುಟಗಳಿಗೆ ಬೇಕಾಗುವ ಮೊತ್ತಕ್ಕಿಂತ ಕಡಿಮೆ ಇರುತ್ತದೆ.

3) ಪ್ರಸ್ತುತ ತಿಂಗಳಿನಲ್ಲಿ ಸ್ವೀಕರಿಸಿ ಅಮಾನತ್ತಿನಲ್ಲಿಟ್ಟ ದಸ್ತಾವೇಜುಗಳು ಅದೇ ತಿಂಗಳಿನಲ್ಲಿ ನೋಂದಣಿಗೆ ಬಿಡುಗಡೆಗೊಳಿಸದೆ ಇದ್ದಲ್ಲಿ ಅಂತಹ ಪುಟಗಳು VMS ಸ್ಕ್ಯಾನಿಂಗ್ ವರದಿಯಲ್ಲಿ ಸೇರಿರುವುದಿಲ್ಲ.ಆದರೆ ಸ್ಕ್ಯಾನಿಂಗ್ ಶುಲ್ಕವು ನೋಂದಾಯಿಸಿದ ದಸ್ತಾವೇಜುಗಳ ಪುಟಗಳಿಗಿಂತ ಹೆಚ್ಚು ಇರುತ್ತದೆ.

ಕ್ರಮಸಂಖ್ಯೆ 1 ರಲ್ಲಿ ಸೂಚಿಸಿದಂತೆ ತಾಂತ್ರಿಕ ದೋಷದಿಂದಾಗಿ Invoice ನಲ್ಲಿ ಮುದ್ರಿತ ಪುಟಗಳಲ್ಲಿ ವ್ಯತ್ಯಾಸ ಕಂಡು ಬಂದಲ್ಲಿ ಮಾತ್ರ ಉಪನೋಂದಣಾಧಿಕಾರಿಯವರು ತಿದ್ದುಪಡಿಮಾಡಿ ಒಟ್ಟು ಪುಟಗಳ ಸಂಖ್ಯೆಗಳನ್ನು ಸರಿಪಡಿಸಬಹುದಾಗಿರುತ್ತದೆ. ಹೀಗೆ ಮಾಡಿದ್ದಲ್ಲಿ ಆ ಕುರಿತಂತೆ ಮುದ್ರಿತ ಪುಟ ಸಂಖ್ಯೆಗಳನ್ನು ತದ್ದು ಪಡಿ ಮಾಡಿ Invoice ನಲ್ಲಿ ಸ್ಪಷ್ಟವಾಗಿ ಷರಾ ಬರೆಯಬೇಕಾಗಿರುತ್ತದೆ.

ಕ್ರಮ ಸಂಖ್ಯೆ 2 ಹಾಗೂ 3 ರಲ್ಲಿ ಸೂಚಿಸಿರುವ ರೀತಿಯಲ್ಲಿ ಸ್ಕ್ಯಾನ್ ಮಾಡಿದ ಪುಟಗಳಲ್ಲಿ ವ್ಯತ್ಯಾಸ ಕಂಡುಬಂದಲ್ಲಿ ಅಂತಹ Invoice ಗಳನ್ನು ತಿದ್ದುಪಡಿ ಮಾಡುವ ಅವಶ್ಯಕತೆ ಇರುವುದಿಲ್ಲ. ಏಕೆಂದರೆ ದಸ್ತಾವೇಜುಗಳನ್ನು ನೋಂದಣಿಗೆ ಸ್ವೀಕರಿಸಿ ಅಮಾನತ್ತಿನಲ್ಲಿಟ್ಟ ಸಂದರ್ಭದಲ್ಲಿ ಸ್ಕ್ಯಾನಿಂಗ್ ಶುಲ್ಕವನ್ನು ಪಕ್ಷಕಾರರಿಂದ ಪಡೆದು ಸರ್ಕಾರಕ್ಕೆ ಜಮಾಮಾಡಲ್ಪಟ್ಟು ಮುಂದೆ ಯಾವ ತಿಂಗಳಿನಲ್ಲಿಯೇ ಆಗಲಿ ಅಂತಹ ದಸ್ತಾವೇಜುಗಳನ್ನು ನೋಂದಾಯಿಸಿ ಸ್ಕ್ಯಾನ್ ಮಾಡಿದಾಗ ಸಹಜವಾಗಿಯೇ ಅಷ್ಟು ಪುಟಗಳು ಆಯಾ ತಿಂಗಳಿನ Invoice ನಲ್ಲಿ ಮುದ್ರಿತವಾಗಿರುತ್ತವೆ.ಇಂತಹ ದಸ್ತಾವೇಜುಗಳ ಪುಟಗಳಿಗೆ ಶೇಖರಿಸಲಾದ ಸ್ಕ್ಯಾನಿಂಗ್ ಶುಲ್ಕವನ್ನು ಸರ್ವಿಸ್ ಪ್ರೊವೈಡರ್‌ಗಳಿಗೆ ಪಾವತಿಸಲೇಬೇಕಾಗುತ್ತದೆ.

ಇಂತಹ ಸಂದರ್ಭಗಳಲ್ಲಿಯೂ ಸಹ ಹೆಚ್ಚುವರಿಯಾದ ಪುಟಗಳು ಹಿಂದಿನ ತಿಂಗಳಿನಲ್ಲಿ ಅಮಾನತ್ತಿನಲ್ಲಿಟ್ಟು ಪ್ರಸ್ತುತ ತಿಂಗಳಿನಲ್ಲಿ ನೋಂದಣಿಗೆ ಆದೇಶಿಸಿದ ದಸ್ತಾವೇಜುಗಳಿಗೆ ಸಂಬಂಧಿಸಿರುತ್ತವೆ ಎಂದು ಅಂತಹ ದಸ್ತಾವೇಜು ಸಂಖ್ಯೆ ಹಾಗೂ ಪುಟಗಳ ಸಂಖ್ಯೆಗಳನ್ನು ನಮೂದಿಸಿ ಷರಾ ಬರೆಯಬೇಕಾಗಿರುತ್ತದೆ ಆದ್ದರಿಂದ ಇಂತಹ ಸಂದರ್ಭಗಳಿಗೆ ಸಂಬಂಧಿಸಿದ Invoice ನಲ್ಲಿರುವ ಮುದ್ರಿತ ಪುಟಗಳ ಸಂಖ್ಯೆಗಳನ್ನು ತಿದ್ದುಪಡಿ ಮಾಡುವ ಅವಶ್ಯಕತೆ ಇರುವುದಿಲ್ಲ.

ಇದರಿಂದಾಗಿ ಆಯಾ ತಿಂಗಳಿನಲ್ಲಿ ಶೇಖರಿಸಲಾದ ಸ್ಕ್ಯಾನಿಂಗ್ ಶುಲ್ಕ ಹಾಗೂ ಅಮಾನತಿನಲ್ಲಿಟ್ಟು ಬಿಡುಗಡೆಗೊಳಿಸಿದ ದಸ್ತಾವೇಜುಗಳಿಗೆ ಈ ಮೊದಲೇ ಶೇಖರಿಸಿದ ಸ್ಕ್ಯಾನಿಂಗ್ ಶುಲ್ಕ ಸೇರಿಸಿದಲ್ಲಿ Invoice ನಲ್ಲಿ ಮುದ್ರಿತವಾದ ಪುಟಗಳ ಸಂಖ್ಯೆಗೆ ತಗಲುವ ಸ್ಕ್ಯಾನಿಂಗ್ ಶುಲ್ಕದಲ್ಲಿ ವ್ಯತ್ಯಾಸವಿಲ್ಲದಿರುವುದನ್ನು ಮನಗಾಣಬಹುದಾಗಿರುತ್ತದೆ.

ಮೇಲ್ಕಂಡ ಸೂಚನೆಗಳನ್ನು ಗಮನದಲ್ಲಿರಿಸಿ Invoice ಗಳಲ್ಲಿ ಮುದ್ರಿತ ಪುಟಗಳನ್ನು ಕ್ರಮ ಸಂಖ್ಯೆ 1 ರಲ್ಲಿ ನಮೂದಿಸಿರುವ ಉದಾಹರಣೆಯಲ್ಲಿ ಸೂಚಿಸಿದ ಸಂದರ್ಭ ಹೊರತುಪಡಿಸಿ ಇನ್ನಾವ ಸಂದರ್ಭದಲ್ಲಿಯೂ ತಿದ್ದುಪಡಿ ಮಾಡದಿರಲು ಸೂಚಿಸಿದೆ ಹಾಗೂ ವ್ಯತ್ಯಾಸದ ಕುರಿತಂತೆ ಈ ಮೇಲೆ ಸೂಚಿಸಿದಂತೆ ಸ್ಪಷ್ಟ ಷರಾ ದಾಖಲಿಸುವಂತೆ ತಿಳಿಯಪಡಿಸಿದೆ.

ನೋಂದಣಿ ಮಹಾಪರಿವೀಕ್ಷಕರು ಮತ್ತು
ಮುದ್ರಾಂಕಗಳ ಆಯುಕ್ತರು,ಬೆಂಗಳೂರು

ಇವರಿಗೆ:

ರಾಜ್ಯದ ಎಲ್ಲಾ ಜಿಲ್ಲಾ ನೋಂದಣಾಧಿಕಾರಿಗಳಿಗೆ/ಉಪ ನೋಂದಣಾಧಿಕಾರಿಗಳಿಗೆ ಅಗತ್ಯ ಕ್ರಮಕ್ಕಾಗಿ